## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 859 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರ ದಿಂದ ಈವರೆಗೂ ರೈತರಿಗೆ ಮಂಜೂರಾಗಿರುವ ಜಮೀನುಗಳನ್ನು ಪೋಡಿ ಮಾಡಿ ದುರಸ್ತಿ ಪಡಿಸಲು ಬಾಕಿಯಿರುವ ಪ್ರಕರಣಗಳೆಷ್ಟು; | ಕೋಲಾರ ಜಿಲ್ಲೆ ವ್ಯಾಪ್ತಿಯಲ್ಲಿ ಸರ್ಕಾರದಿಂದ ರೈತರಿಗೆ ಮಂಜೂರಾಗಿರುವ ಜಮೀನುಗಳ ಮಂಜೂರಿಯಂತೆ ಪೋಡಿ ಮಾಡಲು ಕಂದಾಯ ಶಾಖೆಯಿಂದ ಒಟ್ಟು 7,505 ಬ್ಲಾಕ್ ಗಳ ಅನುಬಂಧ-1 ಸ್ವೀಕೃತಿಯಾಗಿರುತ್ತವೆ. ಈ ಪೈಕಿ 5,518 ಬ್ಲಾಕ್‌ಗಳ ಅಳತೆ ಮತ್ತು 2,090 ಬ್ಲಾಕ್‌ಗಳ ದುರಸ್ತಿ ಕಾರ್ಯ ಪೂರ್ಣ ಗೊಂಡಿದ್ದು, ಭೂಮಾಪನ ಶಾಖೆಯಲ್ಲಿ ಅಳತೆ ಮತ್ತು ಇತರೆ ವಿವಿಧ ಹಂತಗಳಲ್ಲಿ ಇನ್ನೂ 5,415 ಬ್ಲಾಕ್ಸ್ ಗಳು ಬಾಕಿ ಇರುತ್ತದೆ. |

**ತಾಲ್ಲೂಕುವಾರು ಪ್ರಕರಣಗಳ ವಿವರ ಈ ಕೆಳಗಿನಂತಿರುತ್ತದೆ.**

| ಕ್ರ. | ತಾಲ್ಲೂಕುಗಳು | ಸ್ವೀಕೃತಿ ಆಗಿರುವ ಅನುಬಂಧ-1 / ಬ್ಲಾಕ್‌ಗಳು | ಅಳತೆಯಾ ಗಿರುವ ಬ್ಲಾಕ್‌ಗಳು | ದುರಸ್ತಿ ಪಡಿಸಿರುವ ಬ್ಲಾಕ್‌ಗಳು | ವಿವಿಧ ಹಂತದಲ್ಲಿ ಬಾಕಿ |
|---|---|---|---|---|---|
| 1 | ಕೋಲಾರ | 1780 | 1636 | 629 | 1151 |
| 2 | ಮಾಲೂರು | 481 | 303 | 175 | 306 |
| 3 | ಬಂಗಾರಪೇಟೆ | 864 | 553 | 201 | 663 |
| 4 | ಕೆ.ಜಿ.ಎಫ್ | 604 | 448 | 192 | 412 |
| 5 | ಮುಳಬಾಗಿಲು | 2597 | 1978 | 695 | 1902 |
| 6 | ಶ್ರೀನಿವಾಸಪುರ | 1179 | 600 | 198 | 981 |
| | **ಒಟ್ಟು** | **7505** | **5518** | **2090** | **5415** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಆ) | ಈ ರೀತಿ ಬಾಕಿಯಿರುವ ಪ್ರಕರಣಗಳ ಪೈಕಿ ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆ ಗಳಿದ್ದು, ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದೇ ರೈತರು ತಮ್ಮ ಜಮೀನುಗಳನ್ನು ಪೋಡಿ ಮಾಡಿಸಲಾಗದೇ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಕರಣಗಳ ವಿವರಗಳನ್ನು ಒದಗಿಸುವುದು) | ಬಂದಿದೆ.<br><br>ಭೂಮಂಜೂರಿ ಜಮೀನುಗಳ ಕುರಿತು ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆಗಳಿದ್ದು, ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದ ಕಡತಗಳು ಮತ್ತು ಯಾವುದೇ ಮಂಜೂರಿ ಜಮೀನಿನ ದರಖಾಸ್ತು ಪೋಡಿ ಕುರಿತು ಕಡತದಲ್ಲಿ ಕನಿಷ್ಠ ಮೂಲ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿ ಪೋಡಿ ದುರಸ್ತಿ ಪಡಿಸುವ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ74ಎಲ್ ಜಿಪಿ 2009, ದಿನಾಂಕ:17.09.2009 ಮತ್ತು ಕಂಇ 08 ಎಲ್‌ಜಿಪಿ 2016, ದಿನಾಂಕ:20.06.2016 ಮತ್ತು 18.07.2016 ರಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗೈರು ವಿಲೇ ಕಡತ ಪುನರ್ ನಿರ್ಮಾಣ ಸಮಿತಿ ರಚಿಸಿ ಆದೇಶಿಸಿ, ಗೈರು ವಿಲೇ ಕಡತ ತಯಾರಿಸುವ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಮೇಲ್ಕಂಡ ಪ್ರಶ್ನೆಗೆ ಸಂಬಂಧಿಸಿದಂತೆ ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿ, ರೈತರ ಹಿತರಕ್ಷಣೆಗೆ ಸರ್ಕಾರವು ಈವರೆಗೆ ತೆಗೆದುಕೊಂಡ ಕ್ರಮಗಳೇನು; | ಅದರಂತೆ, ಕೋಲಾರ ಜಿಲ್ಲೆಯಲ್ಲಿ ಪ್ರತಿ ತಿಂಗಳ 1ನೇ ಮತ್ತು 3ನೇ ಶನಿವಾರದಂದು ಗೈರು ವಿಲೇ ಪುನರ್ ನಿರ್ಮಾಣ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ ಇತ್ಯರ್ಥಪಡಿಸಲು 29016 ಪ್ರಕರಣಗಳು ಬಾಕಿ ಇರುತ್ತವೆ **(ಪ್ರಕರಣಗಳ ವಿವರ ಅನುಬಂಧದಲ್ಲಿ ಲಗತ್ತಿಸಿದೆ).** |
| (ಈ) | ಇಂತಹ ಪ್ರಕರಣಗಳನ್ನು ಗೈರು ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ, ಇತ್ಯರ್ಥಪಡಿಸದೇ ಬಾಕಿಯಿರುವ ಪ್ರಕರಣ ಗಳೆಷ್ಟು; (ವಿವರಗಳನ್ನು ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024ರ ಆದೇಶದಂತೆ ತಹಶೀಲ್ದಾರರು ಅಗತ್ಯವಾಗಿರುವ ಕನಿಷ್ಠ ಮೂಲ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿ, ಮಂಜೂರಿ ದಾಖಲೆಗಳ ನೈಜತೆಯನ್ನು ಖಾತರಿಪಡಿಸಿ ಕೊಂಡ, ಅನುಬಂಧ 01 ರಿಂದ 05 ಭರ್ತಿಮಾಡಿ, ಅನುಂಬಂಧ 06 ರಿಂದ 10 ರ ಪೋಡಿ ದುರಸ್ತಿ ಅಳತೆಗಾಗಿ ಪ್ರಕರಣಗಳನ್ನು ತಂತ್ರಾಂಶದ ಮುಖಾಂತರ ಸಲ್ಲಿಸಲಾಗುತ್ತಿದೆ. |
| (ಉ) | ಈ ರೀತಿ ಗೈರು ಕಡತಗಳ ವಿಲೇವಾರಿ ಸಮಿತಿಯಲ್ಲಿ ಇತ್ಯರ್ಥವಾಗದೇ, ವಿನಾಕಾರಣ ರೈತರನ್ನು ಅಲೆದಾಡಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು; ಯಾವ ಕಾಲಮಿತಿಯೊಳಗೆ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು? | ಮೇಲಿನಂತೆ, ಈ ರೀತಿ ಬಾಕಿ ಇರುವ ಪ್ರಕರಣಗಳಲ್ಲಿ ತಾಲ್ಲೂಕು ಕಚೇರಿಗಳಲ್ಲಿ ಮಂಜೂರಾತಿ ಹಾಗೂ ಖಾತೆಗೆ ಸಂಬಂಧಿಸಿದ ದಾಖಲೆಗಳನುಸಾರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಗೈರು ವಿಲೇ ಸಮಿತಿಯ ತೀರ್ಮಾನದಂತೆ ಕ್ರಮ ತೆಗೆದುಕೊಂಡು ಹಂತ ಹಂತವಾಗಿ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ. |

**ಸಂಖ್ಯೆ: ಕಂಇ 47 ಎಸ್‌ಎಸ್‌ಸಿ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# Missing Committee Segregation as on report

| slno | Taluk | No of grantees in missing committee | Already Durasthi Done | 1 Document available (OM or Darakasth vahi or Saguvali chiti or Saguvali chiti vahi or Revenue sketch MR or Present Rtc) | 2 Documents available (OM or Darakasth vahi or Saguvali chiti or Saguvali chiti vahi or Revenue sketch MR or Present Rtc) | 3 Documents available (OM or Darakasth vahi or Saguvali chiti or Saguvali chiti vahi or Revenue sketch or MR Present RTC) | Government Grant | No Documents available | Balance Verification |
|---|---|---|---|---|---|---|---|---|---|
| 1 | Srinivasapura | 7198 | 123 | 1784 | 548 | 132 | 215 | 4396 | 0 |
| 2 | Kolar | 5671 | 345 | 1634 | 479 | 127 | 92 | 2994 | 0 |
| 3 | Malur | 4591 | 897 | 769 | 537 | 237 | 0 | 2151 | 0 |
| 4 | Bangarpet | 3496 | 657 | 569 | 456 | 237 | 141 | 1436 | 0 |
| 5 | Mulbagilu | 5915 | 346 | 1933 | 623 | 334 | 51 | 2628 | 0 |
| 6 | KGF | 2145 | 126 | 267 | 378 | 125 | 0 | 1249 | 0 |
| | TOTAL | 29016 | 2494 | 6956 | 3021 | 1192 | 499 | 14854 | 0 |

ತಹಸೀಲ್ದಾರ್
ಹಾಗೂ ಕಚೇರಿ ಸಹಾಯಕರು
ಜಿಲ್ಲಾಧಿಕಾರಿಗಳ ಕಚೇರಿ,
ಕೋಲಾರ. 5/3



File No. RD/47/SSC/2026-RD_SSLR-REVENUE DEPATMENT SEC (Computer No. 2100735)
Generated from eOffice by BASAVARAJ HOSAMANI, RD-ASST1-SSLR(BH), ASSISTANT, REVENUE DEPARTMENT SEC on 07/03/2026 06:29 PM